[ Govt. of Karnataka C.R.P. 67]

Deposition Sheets (RP.No.57) Form No.4 (Civil)

**IN THE COURT OF CIVIL JUDGE & J.M.F.C., KARKALA.**

**Criminal Case No. 1405/2024**

ಪಿ.ಡಬ್ಲ್ಯು : 1 ಸಿ.ಡಬ್ಲ್ಯು : 1

| | | |
|---|---|---|
| ಸಾಕ್ಷಿದಾರನ ಹೆಸರು | : | ಮಹೇಶ್ ಟಿ ಎಂ |
| ತಂದೆಯ ಹೆಸರು | : | ಮಾದಯ್ಯ ಎಂ |
| ಪ್ರಾಯ | : | 40 ವರ್ಷ |
| ಉದ್ಯೋಗ | : | ಪೊಲೀಸ್ ಉಪನೀರಿಕ್ಷಕರು ಹೆಬ್ರಿ |
| ವಾಸ | : | ಹೆಬ್ರಿ |

ದಿನಾಂಕ 16.05.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ನಾನು ದಿಃ10.08.2023 ರಿಂದ ಪ್ರಸ್ತುತ ಇಲ್ಲಿಯವರೆಗೆ ಹೆಬ್ರಿ ಠಾಣೆಯಲ್ಲಿ ಪೊಲೀಸ್ ಉಪನೀರಿಕ್ಷರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 23.06.2024 ರಂದು ಠಾಣಾ ಸಿಬ್ಬಂದಿಗಳಾದ ಚಾಸಾ-3 ಮತ್ತು 4 ಠಾಣಾ ವ್ಯಾಪ್ತಿಯ ರೌಂಡ್ಸ್ ನಲ್ಲಿದ್ದಾಗ ಸೀತಾನದಿ ವ್ಯಾಪ್ತಿಯ ಚಾಸಾ-2 ಕರೆ ಮಾಡಿ ಸೋಮೇಶ್ವರದ ಕಾಸನಮಕ್ಕಿ ರಸ್ತೆಯ ಬಳಿ ಒಬ್ಬರು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ಬಗ್ಗೆ ಮಾಹಿತಿಯನ್ನು ನೀಡಿರುತ್ತಾರೆ. ನಾನು ಚಾಸಾ-2 ರವರನ್ನು ಸೋಮೇಶ್ವರ ಕಾಸನಮಕ್ಕಿ ವೃತ್ತದಲ್ಲಿ ನಿಲ್ಲಲು ಹೇಳಿರುತ್ತೇನೆ. ನಂತರ ನಾನು ತಕ್ಷೀರು ಸ್ಥಳಕ್ಕೆ ಚಾಸಾ-3 ಮತ್ತು 4 ರವರೊಂದಿಗೆ ಹೋಗಿರುತ್ತೇವೆ. ಆ ಸಮಯದಲ್ಲಿ ಸೋಮೇಶ್ವರ ರಸ್ತೆಯ ಬಳಿ ಚಾಸಾ-5 ಮತ್ತು 6 ರವರು ಸಿಕ್ಕಿದ್ದು ಅವರನ್ನು ಈಪ್ರಕರಣದ ಪಂಚರಾಗಿ ಬರಲು ಕೇಳಿಕೊಂಡಿದ್ದೆ. ಅವರು ನಮ್ಮೊಂದಿಗೆ ಬಂದಿರುತ್ತಾರೆ.

ನಾವು ತಕ್ಷೀರು ಸ್ಥಳಕ್ಕೆ ಸುಮಾರು ಮಧ್ಯಾಹ್ನ 2.00 ಗಂಟೆಗೆ ತಲುಪಿರುತ್ತೇವೆ. ನಾವು ಅಲ್ಲಿ ಏನು ನಡೆಯುತ್ತಿದೆ ಎಂದು ಮರೆಯಲ್ಲಿ ನಿಂತು ನೋಡಿದಾಗ ಅಲ್ಲಿ ಒಬ್ಬರು ಮದ್ಯವನ್ನು ಮಾರಾಟಮಾಡುತ್ತಿದ್ದರು ಮತ್ತು 2-3 ವ್ಯಕ್ತಿಗಳು ಖರೀದಿಸಲು ಅಲ್ಲಿಗೆ ಬಂದಿದ್ದರು. ಇದನ್ನು ನೋಡಿ

ನಾವು ದಾಳಿ ಮಾಡಿದೇವು, ನಮ್ಮನ್ನು ನೋಡಿ ಆರೋಪಿ ಮತ್ತು ಖರೀದಿದಾರರು ಓಡಿ ಹೋಗಿರುತ್ತಾರೆ. ನಾವು ಆರೋಪಿಯನ್ನು ಬೆನ್ನಟ್ಟಿ ಹಿಡಿದು ಅವರನ್ನು ವಿಚಾರಿಸಿ ಮಧ್ಯ ಮಾರಾಟ ಮಾಡಲು ಪರವಾನಿಗೆ ಇದೆಯ ಅಥವಾ ಇಲ್ಲವೊ ಎಂದು ಕೇಳಲಾಗಿ ಯಾವುದೇ ಪರವಾನಿಗೆ ಇರುವುದಿಲ್ಲ ಎಂದರು.

ಪಂಚರಾದ ಚಾಸಾ-5 ಮತ್ತು 6 ರವರ ಸಮಕ್ಷಮ ಮಹಜರನ್ನು ಮಾಡಿ ಸ್ವತ್ತುಗಳಾದ 90 ಎಂ ಎಲ್ ಮೈಸೂರು ಲಾನ್ಸರ್ ವಿಸ್ಕಿ -22 ಪ್ಯಾಕೆಟ್, 90 ಎಂ ಎಲ್ ಡಿ ಕೆ ಡಬಲ್ ಕಿಕ್ ವಿಸ್ಕಿ -2 ಪ್ಯಾಕೆಟ್, 90 ಎಂ ಎಲ್ ಒರಿಜಿನಲ್ ಚಾಯಿಸ್ - 6 ಪ್ಯಾಕೆಟ್ , 90 ಎಂ ಎಲ್ ಓಲ್ಡ್ ಮಾಂಕ್ - 5 ಪ್ಯಾಕೆಟ್, 180 ಎಂ ಎಲ್ ಡಿ ಎಸ್ ಪಿ ಬ್ಲಾಕ್ ಡಿಲಕ್ಸ್ ವಿಸ್ಕಿ - 5 ಬಾಟಲ್, ಬಿಳಿ ಕೆಂಪು ಬಣ್ಣದ ಪ್ಲಾಸ್ಟಿಕ್ ಚೀಲ-1, ನಗದು ರೂ.100 ಮುಖ ಬೆಲೆಯ 5 ನೋಟುಗಳು, 50 ಮುಖ ಬೆಲೆಯ 8 ನೋಟುಗಳು, 10 ಮುಖ ಬೆಲೆಯ 3 ನೋಟುಗಳು ಒಟ್ಟು ರೂ.930/-. ಸದ್ರಿ ಮಸಹಜರನ್ನು ಮಧ್ಯಹ್ನ 2.300 ರಿಂದ 3.30 ಗಂಟೆಯವರೆಗೆ ಮಾಡಿರುತ್ತೇನೆ. ಆ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆದಿರುತ್ತೇನೆ.

ಸ್ವತ್ತುಗಳನ್ನು ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಎಸ್ ಹೆಚ್ ಓ ಅರಗು ಸೀಲ್ ಹಾಕಲಾಯಿತು. ಸದ್ರಿ ಸ್ವತ್ತುಗಳನ್ನು ಠಾಣೆಗೆ ತೆಗೆದುಕೊಂಡು ಹೋಗಿ ಚಾಸಾ-14 ರವರಿಗೆ ವಿಷಯ ತಿಳಿಸಿದ ಮೇರೆಗೆ ಪ್ರಕರಣವನ್ನು ದಾಖಲಿಕೊಂಡರು. ಆ ನಂತರ ನಾನು ಸದ್ರಿ ಮಹಜರನ್ನು ಮತ್ತು ಸ್ವಾಧೀನಪಡಿಸಿಕೊಂಡ ಸ್ವತ್ತುಗಳನ್ನು ಹಾಗೂ ಆರೋಪಿಯನ್ನು ಚಾಸಾ-14 ರವರಿಗೆ ಮುಂದಿನ ತನಿಖೆ ಬಗ್ಗೆ ಹಸ್ತಾಂತರಿಸಿರುತ್ತೇನೆ.

ಈಗ ನಾನು ನೋಡಿದ ಮಹಜರಿನಲ್ಲಿ ನನ್ನ ಸಹಿ ಇದೆ. ಸದ್ರಿ ಮಹಜರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. 2 ಭಾವಚಿತ್ರಗಳನ್ನು ಒಟ್ಟಾಗಿ ನಿಪಿ-2 ಎಂದು ಗುರುತಿಸಲಾಯಿತು. ಈಗ ನಾನು ನೋಡಿದ ವರದಿಯಲ್ಲಿರುವ ನನ್ನ ಸಹಿ ಇದೆ. ಸದ್ರಿ ವರದಿಯನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸ್ವಾಧೀನಪಡಿಸಿಕೊಂಡ ಸ್ವತ್ತುಗಳನ್ನು ನೋಡಿದರೆ ಗುರುತಿಸುತ್ತೇನೆ.

ಈಗ ನ್ಯಾಯಾಲಯದ ಮುಂದೆ ಇರುವ ಸ್ವತ್ತುಗಳನ್ನು ನೋಡಿ ಗುರುತಿಸಿದ್ದೇನೆ. 90 ಎಂ ಎಲ್ ಮೈಸೂರು ಲಾನ್ಸರ್ ವಿಸ್ಕಿ -22 ಪ್ಯಾಕೆಟ್ ನ್ನು ಮು ಮಾ-1 ಎಂದು, 90 ಎಂ ಎಲ್ ಡಿ ಕೆ

ಡಬಲ್ ಕಿಕ್ ವಿಸ್ಕಿ -2 ಪ್ಯಾಕೆಟ್ ನ್ನು ಮು ಮಾ-2 ಎಂದು, 90 ಎಂ ಎಲ್ ಒರಿಜಿನಲ್ ಚಾಯಿಸ್ - 6 ಪ್ಯಾಕೆಟ್ ನ್ನು ಮು ಮಾ-3 ಎಂದು, 90 ಎಂ ಎಲ್ ಓಲ್ಡ್ ಮಾಂಕ್ - 5 ಪ್ಯಾಕೆಟ್ ನ್ನು ಮು ಮಾ-4 ಎಂದು, 180 ಎಂ ಎಲ್ ಡಿ ಎಸ್ ಪಿ ಬ್ಲಾಕ್ ಡಿಲಕ್ಸ್ ವಿಸ್ಕಿ - 5 ಬಾಟಲ್ ನ್ನು ಮು ಮಾ-5 ಎಂದು, ಬಿಳಿ ಕೆಂಪು ಬಣ್ಣದ ಪ್ಲಾಸ್ಟಿಕ್ ಚೀಲ-1 ನ್ನು ಮು ಮಾ-6 ಎಂದು, ನಗದು ರೂ.100 ಮುಖ ಬೆಲೆಯ 5 ನೋಟುಗಳು, 50 ಮುಖ ಬೆಲೆಯ 8 ನೋಟುಗಳು, 10 ಮುಖ ಬೆಲೆಯ 3 ನೋಟುಗಳು ಒಟ್ಟು ರೂ.930/- ಗಳನ್ನು ಒಟ್ಟಾಗಿ ಮು ಮಾ-7 ಎಂದು ಗುರುತಿಸಲಾಯಿತು.

ನಾನು ದಸ್ತಗಿರಿ ಮಾಡಿದ ವ್ಯಕ್ತಿಯು ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯಾಗಿರುತ್ತಾರೆ.

ದಿಃ04.08.2024 ರಂದು ತಹಸಿಲ್ದಾರ್ ರವರಿಗೆ ತಕ್ಷೀರು ಸ್ಥಳ ಯಾರಿಗೆ ಸೇರಿದ್ದು ಎಂದು ವರದಿ ನೀಡುವ ಬಗ್ಗೆ ಕೋರಿಕೆ ಪತ್ರವನ್ನು ನೀಡಿರುತ್ತೇನೆ.

ಪಾಟೀ ಸವಾಲು ಃ ಆರೋಪಿ ಪರ ಃ ಶ್ರೀ ಹೆಚ್ ಆರ್ ಕೆ ವಕೀಲರಿಂದ ಃ

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೆ ಪ್ರಥವಾಗಿ ಚಾಸಾ-2 ರವರು ಮಾಹಿತಿ ನೀಡಿರುತ್ತಾರೆ. ಚಾಸಾ-2 ರವರಿಗೆ ಬಾತ್ಮೀದಾರರಿಂದ ಮಾಹಿತಿ ಬಂದಿರುತ್ತದೆ ಎಂದು ನನಗೆ ಹೇಳಿರುತ್ತಾರೆ. ನನಗೆ ಮಧ್ಯಾಹ್ನ 1.30 ಗಂಟೆಗೆ ಸದ್ರಿ ಪ್ರಕರಣದ ಬಗ್ಗೆ ಮಾಹಿತಿ ದೊರಕಿರುತ್ತದೆ. ಚಾಸಾ-2 ರವರು ಆರೋಪಿಗಳ ವಿವರಗಳನ್ನು ನನಗೆ ತಿಳಿಸಿರುವುದಿಲ್ಲ. ನಾನು ಸೀತಾನದಿ ಆವರಣದಲ್ಲಿ ಸರಿಸುಮಾರು 1.30 ಗಂಟೆಗೆ ಗಸ್ತಿನಲ್ಲಿ ಇದ್ದೆ. ಚಾಸಾ-3 ಮತ್ತು 4 ನನ್ನ ಜೊತೆ ಇದ್ದರು.

ನನಗೆ ಕರ್ನಾಟಕ ಅಬಕಾರಿ ಕಾಯಿದೆ ಕಲಂ 53 ಮತ್ತು 54 ರ ಬಗ್ಗೆ ತಿಳಿದಿದೆ. ಕಲಂ 53 ರ ಪ್ರಕಾರ ನ್ಯಾಯಾಲಯದಿಂದ ಸರ್ಚ್ ವಾರಂಟನ್ನು ಪಡೆದುಕೊಂಡು ನಂತರ ದಾಳಿಯನ್ನು ಮಾಡುವ ಬಗ್ಗೆ ಇದೆ ಎಂದರೆ ಸಮಯವಕಾಶ ಇದ್ದಲ್ಲಿ ಪಡೆದುಕೊಳ್ಳಬಹುದು. ಕಲಂ 54 ರ ಪ್ರಕಾರ ಸಮಯವಕಾಶ ಇಲ್ಲದಿದ್ದಲ್ಲಿ ಸರ್ಚ್ ಮೆಮೊ ವನ್ನು ತಯಾರಿಸಿ ನಂತರ ದಾಳಿ ಮಾಡಬೇಕಾಗಿದೆ ಎಂದರೆ ನನಗೆ ಮಾಹಿತಿ ಇಲ್ಲ. ನಿಪಿ-3 ದೂರನ್ನು ನಾನೇ ತಯಾರಿಸಿದ್ದೇನೆ. ಅದರಲ್ಲಿ ಕಲಂ 54 ರ ಉಲ್ಲೇಖ ಇದೆ ಎಂದರೆ ಸರಿ. ಹೀಗಿದ್ದಲ್ಲಿ ನಾನು ಕಲಂ 54 ರಲ್ಲಿ ಉಲ್ಲೇಖಿಸಿದ ಸರ್ಚ್ ಮೆಮಾ ವನ್ನು ತಯಾರಿಸದಿದ್ದಲ್ಲಿ ನನ್ನ ದಾಳಿಯು ಕಾನೂನು ಬಾಹಿರವಾಗಿದೆ ಎಂದರೆ ಸರಿಯಲ್ಲ.

ನಮ್ಮ ಸಿಬ್ಬಂದಿಗಳು ಸೋಮೇಶ್ವರ ಕಾಸಾನಮಕ್ಕಿ ಜಂಕ್ಷನ್ 100 ಮೀಟರ್ ಹತ್ತಿರ ಯಾವಾಗಲೂ ಅಲ್ಲಿ ಬ್ಯಾರಿಕೇಡ್ ಹಾಕಿ ವಾಹನ ತಪಾಸಣೆ ಮಾಡುತ್ತಾರೆ ಎಂದರೆ ಸರಿ. ತಕ್ಷೀರು ಸ್ಥಳದಿಂದ ಸದ್ರಿ ಬ್ಯಾರಿಕೇಡ್ ಸುಮಾರು 200 ಮೀಟರ್ ದೂರದಲ್ಲಿ ಇದೆ. ನನಗೆ ಈ ಪ್ರಕರ್ಣ ಬಗ್ಗೆ ಮಾಹಿತಿ ಬಂದಾಗ ಸೋಮೇಶ್ವರ ಕಾಸಾನಮಕ್ಕಿ ಜಂಕ್ಷನ್ ಬಳಿ ಇದ್ದ ನನ್ನ ಸಿಬ್ಬಂದಿಗಳಿಗೆ ಮಾಹಿತಿಯನ್ನು ನೀಡಿರುವುದಿಲ್ಲ.

ಚಾಸಾ-2 ರವರು ಆ ಸಮಯದಲ್ಲಿ ಸೋಮೇಶ್ವರದಲ್ಲಿ ಗಸ್ತು ಮಾಡುತ್ತಿದ್ದರು. ನಾನು ಚಾಸಾ-2 ರಿಂದ 4 ತಕ್ಷೀರು ಸ್ಥಳಕ್ಕೆ 2.00 ಗಂಟೆಗೆ ಬಂದಿರುತ್ತೇವೆ. ನಾವು ದಾಳಿ ಮಾಡಿದ್ದೇವೆ ಎನ್ನುವ ಪೂರ್ವದಲ್ಲಿ 10 ನಿಮಿಷ ಮುಂಚೆ ನಾವು ಅಲ್ಲಿ ನೆರೆದಿದ್ದೇವು. ಮು ಮಾ-1 ರಿಂದ 7 ಸರಕಾರಿ ಜಾಗದಲ್ಲಿ ಇತ್ತು. ನಾವು ಗಮನಿಸುವ ಸಮಯದಲ್ಲಿ ಒಬ್ಬ ಗಿರಾಕಿ ಬಂದು ಮದ್ಯವನ್ನು ತೆಗೆದುಕೊಂಡು ಹೋಗಿರುತ್ತಾನೆ. ನಾನು ಸದ್ರಿ ವ್ಯಕ್ತಿಯ ಚಹರೆಯನ್ನು ನಿಖರವಾಗಿ ನೋಡಿರುವ ಬಗ್ಗೆ ನೆನಪಿಲ್ಲ. ಸದ್ರಿ ಸ್ಥಳದಲ್ಲಿ ಯಾವುದೆ ಖಾಲಿ ಸ್ಯಾಚೆಟ್ ಇರಲಿಲ್ಲ. ಚಾಸಾ-5 ಮತ್ತು 6 ರವರನ್ನು ನಾನು ದಾಳಿ ಮಾಡುವ ಪೂರ್ವದಲ್ಲಿ ಕರೆದುಕೊಂಡು ಹೋಗಿರುತ್ತೇನೆ. ನಾನು ಚಾಸಾ-5 ಮತ್ತು 6 ರವರಿಗೆ ನೀಡಿದ ಪಂಚಾಯತಿದಾರರ ನೋಟಿಸು ನನ್ನ ಕೈ ಬರಹದಲ್ಲಿ ಇಲ್ಲ. ನಿಪಿ-1 ಮಹಜರು ನನ್ನ ಕೈಬರಹದಲ್ಲಿ ಇದೆ.

ಸಾಮಾನ್ಯವಾಗಿ ಸ್ವತ್ತು ಸ್ವಾ ಧೀನತಾ ಮಹಜರು, ಸ್ಥಳ ಮಹಜರನ್ನು ಪ್ರತ್ಯೇಕವಾಗಿ ಮಾಡುತ್ತೇವೆ. ಪಂಚರ ಸಮಕ್ಷಮ ಸ್ಥಳದಲ್ಲಿ ಸ್ವತ್ತನ್ನು ಸ್ವಾಧೀನಪಡಿಸಿಕೊಳ್ಳುವಾಗ ಆರೋಪಿಗಳಿಗೆ ಏನನ್ನು ಸ್ವಾಧೀಪಡಿಸಿಕೊಳ್ಳುತ್ತಿದ್ದೇವೆ ಎಂದು ಮಾಹಿತಿಯನ್ನು ನೀಡಬೇಕು ಎಂದರೆ ಅದು ನನಗೆ ಗೊತ್ತಿಲ್ಲ. ನಾನು ಸ್ವಾ ಧಿನಪಡಿಸಿಕೊಂಂಡಿದ್ದೇವೆ ಎಂದು ಹೇಳಮ ಮುದ್ದೆ ಮಾಲುಗಳ ಮೇಲೆ ಇರುವ ಬ್ಯಾಚ್ ನಂಬರ್ ನಿಪಿ-1 ಮಹಜರಿನಲ್ಲಿ ನಮೂದಿಸಿರುವುದಿಲ್ಲ ಎಂದರೆ ಬ್ಯಾಚ್ ನಂಬರ್ ಇಲ್ಲ. ಮು ಮಾ-7 ರ ಕ್ರಮಸಂಖ್ಯೆ ಮಹಜರಿನಲ್ಲಿ ನಮೂದು ಇರುವುದಿಲ್ಲ.

ಠಾಣೆಯ ಅಂಕಿಅಂಶಗಳಿಗೋಸ್ಕರ ಈ ಪ್ರಕರಣವನ್ನು ದಾಖಲಿಸಿರುತ್ತೇನೆ ಮತ್ತು ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳಿಗೆ ಮತ್ತು ಆರೋಪಿಗೆ ಯಾವುದೇ ಸಂಬಂಧ ಇಲ್ಲ ಮತ್ತು ನಾನು ಯಾವುದೇ ದಾಳಿ ಮಾಡಿರುವುದಿಲ್ಲ ಹಾಗೂ ಸ್ಥಳ ಮಹಜರು ಮಾಡಿರುವುದಿಲ್ಲ ಮತ್ತು ಯಾವುದೇ ಸ್ವತ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಶಕ್ಕೆ ಪಡಿಸಿಕೊಂಡಿದ್ದೇನೆ ಎಂದು ಹೇಳುವ ಸ್ವತ್ತುಗಳನ್ನು ದಿ:23.06.2024 ರಂದು ಚಾಸಾ-14 ರವರಿಗೆ

ನೀಡಿದ್ದೇನೆ. ಚಾಸಾ-14 ರವರು ಅರೋಪಿಯನ್ನು ಅದೇ ದಿನ ದಸ್ತಗಿರಿ ಮಾಡಿದ್ದಾರೆ ಎಂದು ಗೊತ್ತಿಲ್ಲ. ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ